
ಕಂಪನಿಯು ಯೋಜಿಸಿದ ಪ್ರವಾಸದ ಭಾಗವಾಗಿ ಥಾಯ್ಲೆಂಡಿಗೆ ಬಂದಿರುವನು. ಕಥೆ ಅವನ ಪಾಪಪ್ರಜ್ಞೆಯ ತೊಳಲಾಟವನ್ನು ಕಾಣಿಸಿದೆ. ಅವನಿಗೆ ಪ್ರವಾಸದ ಸುಖ ಅನುಭವಿಸಲಾಗುತ್ತಿಲ್ಲ. ಸಾಯುತ್ತಿರುವ ರೈತರ ನರಳಾಟ ಅವನ ಅಂತರಂಗವನ್ನು ತಳಮಳಕ್ಕೊಳಪಡಿಸಿದೆ. ಅಲ್ಲಿನ ಬುದ್ಧ ದೇವಾಲಯಗಳು 'ನೀನು ತೊಲಗು, ನೀನು ತೊಲಗು' ಎಂದು ಅವನನ್ನು ದೂರ ತಳ್ಳುತ್ತಿರುವಂತೆ ಭಾಸವಾಗುತ್ತಿದೆ. ಎಂದೋ ಕೇಳಿದ ಬುದ್ಧನ ಬಗೆಗಿನ ಚೂರುಪಾರು ಸಂಗತಿಗಳು ಇವನನ್ನು ತಿನ್ನತೊಡಗಿವೆ. ಒಂದು ಆತ್ಮಾವಲೋಕನದ ಧಾಟಿ ಕಥೆಯನ್ನು ಮುನ್ನಡೆಸುತ್ತಿದೆ. ಜೀವನದಲ್ಲಿ ಮೊದಲ ಬಾರಿಗೆ ವ್ಯಾಪಾರವೆಂದರೆ ಏನು ಎನ್ನುವ ಪ್ರಶ್ನೆ ಅವನಿಗೆ ಎದುರಾಗಿದೆ. ರೈತರನ್ನು ಸಾಯಿಸುವ ಕ್ರಿಮಿನಾಶಕಗಳನ್ನು ಹೆಚ್ಚು ಪ್ರಮಾಣದಲ್ಲಿ ಮಾರಿ ಇನ್ನಷ್ಟು ಲಾಭ ಗಳಿಸುವುದೇ ವ್ಯಾಪಾರವೆಂದು ತನ್ನ ತಲೆಯಲ್ಲಿ ತುರುಕಿದವರು ಯಾರು? ಎಂದು ಆತ ವಿಹ್ವಲಗೊಂಡಿದ್ದಾನೆ. ಬುದ್ಧನ ಮುಂದೆ ಬೇಡಿಕೊಳ್ಳಲು ಅಲ್ಲ, ಕುಳಿತುಕೊಳ್ಳಲು ಕೂಡ ತಾನು ಯೋಗ್ಯನಲ್ಲ ಅನಿಸಿಬಿಟ್ಟಿದೆ. ಪ್ರಾರ್ಥನೆಗೆ ಕುಳಿತರೆ ವ್ಯವಹಾರದ ಟಾರ್ಗೆಟ್‌ಗಳು ಅವನ ಕಣ್ಣೆದುರು ಹಾಯುತ್ತಿವೆ. ರೈತರ ಜೀವದ ಮೇಲೆ ಗೋರಿಕಟ್ಟುವ ಚಿತ್ರಗಳು, ಪಕ್ಕದವರನ್ನು ಮೀರಿ ಗೆಲ್ಲುವ ಆಕಾಂಕ್ಷೆಗಳು, ಅನಿವಾರ್ಯವಾದ ಹಿಂಸೆಯ ದಾಳಗಳು, ಸ್ಪರ್ಧೆಯಲ್ಲಿ ಗೆಲ್ಲಲು ಆಯ್ಕೆಮಾಡಿಕೊಳ್ಳುವ ಮೋಸದ ತಂತ್ರಗಳು ಅವನನ್ನು ದಣಿಸಿಬಿಟ್ಟಿವೆ. ಅಮಾನವೀಯ ಸ್ಪರ್ಧೆಯಲ್ಲದೆ ತನಗೆ ವ್ಯಾಪಾರವಿಲ್ಲ ಎಂದು ನಂಬಿಸಿಬಿಟ್ಟಿರುವ ವ್ಯವಸ್ಥೆ ಅವನನ್ನು ಮಾನಸಿಕ ಆಘಾತಕ್ಕೆ ತಳ್ಳಿದೆ. ಲಾಭವಾದಷ್ಟೂ ಹಸಿವು ತೀರುತ್ತಿಲ್ಲ. ಇನ್ನಷ್ಟು, ಮತ್ತಷ್ಟು ಲಾಭದ ದಾರಿಗಳ ಬೆನ್ನುಹತ್ತುವಂತೆ ಹುರಿದುಂಬಿಸಿದೆ. ಇಂತಿಷ್ಟು ಕ್ರಿಮಿನಾಶಕಗಳನ್ನು ಮಾರಿದರೆ ವಿದೇಶಿ ಕಾರು, ವಿದೇಶ ಪ್ರವಾಸ, ವಿದೇಶಿ ಹೆಣ್ಣುಗಳ ಒಡನಾಟ – ಹೀಗೆ ಅವಕಾಶಗಳ ಬಾಗಿಲನ್ನೇ ತೆರೆದಿಟ್ಟಿದೆ. ಬಂಡವಾಳದ ಚಲನೆ ಮನುಷ್ಯರ ರಕ್ತದ ಕಾಲುವೆಯ ಮೂಲಕ ಸಂಭವಿಸುತ್ತಿದೆ.




ಬುದ್ಧ ಗಂಟೆಯ ಸದ್ದು
ಲೇ: ಮಹಾಂತೇಶ ನವಲಕಲ್
ಪು: 170; ಬೆ: ರೂ. 190
ಪ್ರ: ಪಲ್ಲವ ಪ್ರಕಾಶನ, ಚನ್ನಪಟ್ಟಣ.
ಮೊಬೈಲ್: 94803 53507.

ಅಮಾನುಷ ವ್ಯವಸ್ಥೆಯ ಗಾಯಗಳಲ್ಲಿ ಎಲ್ಲರೂ ಸಿಲುಕಿದ್ದಾರೆ. ಈ ಮೂಲಕ ನಮ್ಮ ಕಾಲದ ಅಸಲೀ ಕಥೆಯನ್ನು ಮಹಾಂತೇಶ ಸೃಷ್ಟಿಸತೊಡಗಿದ್ದಾರೆ.

ಈ ಕಥೆ ಘಟನಾಪ್ರಧಾನವಲ್ಲ, ಸ್ಮೃತಿ ಪ್ರಧಾನ. ಈ ಸ್ಮೃತಿಗಳು ಹಿಂದಕ್ಕೂ ಮುಂದಕ್ಕೂ ಚಲಿಸುತ್ತಿವೆ. ಅವನ ಈವರೆಗಿನ ಚಲನೆಯು ನರಕದ ಬಾಗಿಲಿಗೆ ತಂದು ನಿಲ್ಲಿಸಿರುವುದನ್ನು ಹೇಳುತ್ತಿವೆ. ಅಮೂರ್ತ ವೈರಿಗಳು ಯಾವ್ಯಾವುದೋ ರೂಪದಲ್ಲಿ ನಿಂತು ಇವನಿಗೆ ನಿರ್ದೇಶನ ನೀಡತೊಡಗಿದ್ದಾರೆ. ಫಲವತ್ತಾದ ಬೀಜಗಳೆಂದು ಮೋಸದಿಂದ ಮಾರಿದ ಬೀಜಗಳು ಈಗ ಮುರುಟಿಹೋಗಿವೆ;